ಮಾಡಿಕೊಡಿಯೆಂದು ತಾವು ಕೇಳಬೇಕಿತ್ತು. ತಾವೇನು ಹೋರಾಟ ಮಾಡಿಕೊಂಡು ಅಧಿಕಾರಕ್ಕೆ ಬಂದಿದ್ದೀರಿ, ಕೇವಲ ಕುರ್ಚಿಗಾಗಿ ಹೋರಾಟ ಮಾಡಿದ್ದೀರಿ ಇದರಲ್ಲಿ ಜನರ ಹಿತ ಇಲ್ಲವೆಂದು ತಿಳಿದುಕೋಳ್ಳುತ್ತೇವೆ. ಸತ್‌ಸಂಪ್ರದಾಯದ ಬಗ್ಗೆ ಮಾನ್ಯ ಮಂತ್ರಿಗಳು ಮಾತನಾಡಿದರು. ನಿಯಮಗಳ ಅಡಿಯಲ್ಲಿ ಈ ರಾಜ್ಯದಲ್ಲಿ ಆಗಿರುವಂತಹ ಅವ್ಯವಹಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಬಹುಶಃ ನಿಯಮಗಳ ಬಗ್ಗೆ ನಾವು ಯೋಚನೆ ಮಾಡುವಂತಹ ಕಾಲ ಬರಬಹುದು. ನಾನು ವಿನಂತಿ ಮಾಡುತ್ತೇನೆ, ಸರ್ಕಾರ ಈಗ ಮುಂದೆ ಬಂದು, ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಇಲ್ಲದಿದ್ದರೆ ಜನ ನಮಗೆ ಏನು ಈ ಸ್ಥಾನದಲ್ಲಿ ಕೂರಿಸಿದ್ದಾರೆ...

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ಮಾತನಾಡಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ. I reserve my ruling on this Adjournment Motion and go to the next subject.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದು ಒಂದೇ ಒಂದು ಮಾತು. ನಮ್ಮ ಜನತಾದಳದ ಸ್ನೇಹಿತರು ನಿಯಮ ೬೮ರಡಿಯಲ್ಲಿ ಚರ್ಚೆ ಮಾಡುತ್ತೇವೆಂದು ನೆಪ ಮಾಡಿ ಕೊಂಡು ಭ್ರಷ್ಟಚಾರದ ಹಗರಣಗಳಲ್ಲಿ ಶಾಮೀಲಾಗಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಉದ್ದೇಶ ಪೂರ್ವಕವಾಗಿ ಚರ್ಚೆಗೆ ಅಡ್ಡಿ ಮಾಡಿಕೊಂಡು ಸಿಬಿಐ ಅಥವಾ ಇನ್ನಾವುದೇ ತನಿಖೆಯಾದರೆ ಎಲ್ಲಾ ಬಯಲಿಗೆ ಬರುತ್ತದೆಂದು ಹೇಳಿ ಹೀಗೆ ಮಾಡಿದ್ದಾರೆ ಈ ತರಹ ಜನತಾದಳದ ಮುಖಂಡರ ನಡವಳಿಕೆಯನ್ನು ನಾನು ಧಿಕ್ಕರಿಸಿ ಸಭಾತ್ಯಾಗ ಮಾಡುತ್ತೇನೆ.

MEDAM DEPUTY SPEAKER: I reserve my ruling.

(ಗೊಂದಲ)

(ಈ ಹಂತದಲ್ಲಿ ಭಾರತೀಯ ಜನತ ಪಾರ್ಟಿಯ ಸದಸ್ಯರು ಸಭಾತ್ಯಾಗ ಮಾಡಿದರು.)

ಉಪಾಧ್ಯಕ್ಷರು : ಏತಕ್ಕೆ ವಾಕ್ ಔಟ್ ಮಾಡುತ್ತೀರಿ? You participate in the debate. (ಈ ಸಂದರ್ಭದಲ್ಲಿ ಯಡಿಯೂರಪ್ಪನವರು ತಮ್ಮ ಪೀಠದಿಂದ ದೂರ ನಿಂತು ಮಾತನಾಡುತ್ತಿದ್ದರು.)

ಉಪಾಧ್ಯಕ್ಷರು : ಈ ತರಹ ಮಾತನಾಡಿದರೆ ಹೇಗೆ? ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಭಾತತೀಯ ಜನತಾಪಾರ್ಟಿಯವರ ಆಟ ಏನನೆಂದರೆ, ನಿಲುವಳಿ ಸೂಚನೆ ಮಾಡಿದರೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೆಂದು ಇವರಿಗೆ ಗೊತ್ತು. ನಿಯಮ 68ರ ಪ್ರಕಾರ ವಿವರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶವಿದೆ. ಹಾಗಾಗಿ ವಿವರವಾಗಿ ಚರ್ಚೆ ಮಾಡಿದರೆ ಅಲ್ಲಿರುವ ಜನ ಹಾಗೂ ಮಾನ್ಯ ಬಂಗಾರಪ್ಪನವರಿಗೆ ಮತ್ತು ಕೆಲವರಿಗೆ ಕಷ್ಟ ಆಗಬಹುದು ಕೆಲವು ಅಧಿಕಾರಗಳಿಗೆ ಕಷ್ಟ ಬರಬಾರದೆಂದು ತಿಳಿದು ಇವರು ಸಹ ಶಾಮೀಲಾಗಿ ಚರ್ಚೆಗೆ ಅವಕಾಶವಾಗಬಾರದೆಂದು ನಿಲುವಳಿ ಸೂಚನೆ ಮೂವ್ ಮಾಡಿದ್ದಾರೆಂದು ನಾನು ಅವರ ಮೇಲೆ ಚಾರ್ಜ್ ಮಾಡುತ್ತೀದ್ದೇನೆ.